



ಅರುಣ ಪಿ. ಭಟ್ಟ

## ವಾರಭವಿಷ್ಯ:14.04.2022ರಿಂಧ 20.04.2022ರವರೆಗೆ



**ಮೇಷ**

ಅನೀರಿಕ್ಷಿತವಾಗಿ ವಿವಾಹ ಪ್ರಸ್ತಾಪ ಬರುವುದು. ನಿಮ್ಮನ್ನು ಚಿಂತೆಗೆ ದೂಡಿದ್ದ ಮನೆಯಲ್ಲಿನ ಆರ್ಥಿಕ ಸಂಕಷ್ಟ ಬಗೆಹರಿಯುವುದು. ಕಲಾವಿದರಿಗೆ ಉತ್ತಮ ಆದಾಯ ಬರುವ ಸಾಧ್ಯತೆ ಇದೆ. ನೌಕರಿಯಲ್ಲಿ ಇರುವವರಿಗೆ ಬಡ್ತಿ ಸಿಗಲಿದೆ. ವಿದ್ಯಾರ್ಥಿಗಳಿಗೆ ಉಚ್ಚ ಶಿಕ್ಷಣ ಭಾಗ್ಯ. ಆದರೆ ಕೌಟುಂಬಿಕ ಜವಾಬ್ದಾರಿಯಲ್ಲಿ ಹಿನ್ನಡೆ. ಶುಭದಿನ 15. ಶ್ರೀಕೃಷ್ಣ ಪೂಜೆ ಉಪವಾಸ ಮಾಡಿರಿ. ತುಲಸಿ ಅರ್ಚನೆ ಮಾಡಿರಿ.



**ವೃಷಭ**

ಪ್ರಾರಂಭದ ಎರಡು ದಿನಗಳಲ್ಲಿ ನಿಮಗೆ ಬಂಧುಗಳಿಂದ ಸುವಾರ್ತೆ ಸಿಗಲಿದೆ. ಗೃಹ ನಿರ್ಮಾಣ ಕೆಲಸಗಳಲ್ಲಿ ಅನೀರಿಕ್ಷಿತ ಪ್ರಗತಿ ಕಾಣಲಿದ್ದೀರಿ. ನಿರುದ್ಯೋಗಿಗಳಿಗೆ ಸರಕಾರಿ ಉದ್ಯೋಗ ಸಿಗುವ ಸಾಧ್ಯತೆ ಇದೆ. ಪತ್ನಿಯಿಂದ ಪೀಡನೆ ತುತ್ತಾಗಬಹುದು. ವಿವಿಧ ಮೂಲಗಳಿಂದ ಧನಲಾಭ. ಮಿತ್ರರಿಂದ ಅಸಂತೋಷದ ಘಟನೆಗಳು ಜರುಗಬಹುದು. ಶುಭದಿನ 16. ಕಾಲ ಭೈರವಾಷ್ಟಕ ಪಠಣ ಮಾಡಿರಿ.



**ಮಿಥುನ**

ಬಹುದಿನಗಳಿಂದ ಕಾಡುತ್ತಿದ್ದ ಗೃಹ ಕಲಹಕ್ಕೆ ಮುಕ್ತಿ ದೊರೆಯುವುದು. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿದ ಅಭ್ಯರ್ಥಿಗಳಿಗೆ ಉತ್ತಮ ಯಶ. ಸರಕಾರಿ ನೌಕರದಾರರಿಗೆ ಪದೋನ್ನತಿ ಸಿಗಲಿದೆ. ತಮ್ಮ ಇಚ್ಛೆಯ ಅನುಸಾರ ವರ್ಗಾವಣೆಯ ಭಾಗ್ಯ ಇದೆ. ವಾರಾಂತ್ಯದಲ್ಲಿ ಆಪ್ತರಿಂದ ಸನ್ಮಾನ. ಅನೀರಿಕ್ಷಿತ ಚಿಕ್ಕ ಪ್ರವಾಸ. ಕಾಗದ ಪತ್ರಗಳ ಕೆಲಸ. ಶುಭದಿನ 20. ನವನಾಗ ನಾಮ ಸ್ತೋತ್ರ ಮಾಡಿರಿ.



**ಕಟಕ**

ತಾಂತ್ರಿಕ ಉದ್ಯೋಗಸ್ಥರಿಗೆ ನಿರೀಕ್ಷೆಗಿಂತ ಲಾಭ. ವಿದ್ಯುತ್ ಗುತ್ತಿಗೆದಾರರು ಜನರಿಂದ ಪ್ರಶಂಸೆಗೆ ಒಳಗಾಗುತ್ತೀರಿ. ಪರ ಊರಿನ ಪ್ರವಾಸದಲ್ಲಿ ಜ್ವರ ಪೀಡೆ ಕಾಣಿಸಬಹುದು ಎಚ್ಚರದಿಂದ ಇರುವುದು ಕ್ಷೇಮ. ಮಕ್ಕಳು ಮುನಿಸಿಕೊಂಡಾರು. ಶತ್ರುಗಳ ಕಾಟ ನಡೆಯೋದಿಲ್ಲ. ಮನೆಗೆ ಅಪರೂಪದ ಅತಿಥಿಗಳ ಆಗಮನ. ಆರೋಗ್ಯ ಭಾಗ್ಯ. ಶುಭದಿನ 18. ಪುಷ್ಯರಾಗ ಹರಳು ದಾರಣೆ ಮಾಡಿರಿ. ದತ್ತಾತ್ರೇಯ ಸ್ತುತಿ ಮಾಡಿರಿ.



**ಸಿಂಹ**

ನೆನೆಗುದಿಗೆ ಬಿದ್ದ ಕೆಲಸಗಳು ಕೊನೆಯ ಹಂತ ತಲುಪುವವು. ಹೊಸ ನಿವೇಶನ ಖರೀದಿಗೆ ಇದು ಸಕಾಲ. ಆದರೆ ಮನೆ ಬದಲಾಯಿಸಿದರೆ ತೊಂದರೆ ಉಂಟಾಗಬಹುದು. ನಿರೀಕ್ಷಿತ ಜನರಿಂದ ಸಾಮಾಜಿಕ ಮನ್ನಣೆ ಮಾನ ಸನ್ಮಾನ. ಸಂಕಟದ ಮಧ್ಯೆ ಮಿಂಚುವಿರಿ. ಹೊಸವಸ್ತು ಖರೀದಿ ಪ್ರಕ್ರಿಯೆ. ಉದರ ದೋಷ ಕಾಡುವ ಸಾಧ್ಯತೆ ಇದೆ. ಶುಭದಿನ 19. ದಶರಥ ವಿರಚಿತ ಶನಿ ಸ್ತೋತ್ರ ಮಾಡಿರಿ.



**ಕನ್ಯಾ**

ಉತ್ತಮವಾದ ವ್ಯವಸ್ಥೆಯಲ್ಲಿ ಇದ್ದಂತೆ ಅನ್ನಿಸಿದರೂ ಕಟ್ಟಿಕೊಂಡ ಕನಸು ಒಂದೊಂದಾಗಿ ಕರಗುವವು. ನಿಮ್ಮ ಸೇವಕರು ಅಥವಾ ಸಿಬ್ಬಂದಿ ಕೆಲಸ ಬಿಟ್ಟು ಹೋಗುತ್ತಾರೆ. ಹೆಂಡತಿಗೆ ತವರುಮನೆ ವಾಸವೇ ಇಷ್ಟ. ವಿವಾಹ ಪ್ರಸ್ತಾಪಕ್ಕೆ ಅನುಕೂಲವಾದ ಸಮಯ. ಮೋಜಿಗಾಗಿ ಖರ್ಚು ಮಾಡುವುದನ್ನು ತಪ್ಪಿಸಿ. ಕಾಲು ನೋವು ಕಾಡಬಹುದು. ಶುಭದಿನ 17. ನವಧಾನ್ಯಗಳನ್ನು ಈಶ್ವರ ಗುಡಿಗೆ ನೀಡಿರಿ.



**ತುಲಾ**

ಸರ್ವ ಪ್ರಕಾರದಿಂದಲೂ ಈ ವಾರ ಉತ್ತಮವಾದ ದಿನಗಳು ನಿಮಗೆ ಸಿಗಲಿವೆ. ದೇವಾಲಯ ಪ್ರಮುಖರಿಗೆ ಸರಕಾರಿ ಅನುದಾನ ಸಿಗುತ್ತದೆ. ಗಂಡ ಯಾ ಹೆಂಡತಿಗೆ ಉತ್ಕರ್ಷ, ಸಾಮಾಜಿಕ ಮನ್ನಣೆ ಪರದೇಶ ಪ್ರವಾಸ ಮಾಡುವ ಯೋಗವಿದೆ. ನಿಮ್ಮ ಕೆಲಸದಲ್ಲಿ ನಿಮ್ಮ ವ್ಯಕ್ತಿತ್ವದ ಛಾಪು ಒತ್ತುವಿರಿ. ಹೊಸ ಮಿತ್ರರಿಂದ ಲಾಭ. ವಾರದ ಕೊನೆಯ ದಿನ ನಷ್ಟ. ಶುಭದಿನ 15. ಬ್ರಹ್ಮೋತ್ತರ ಖಂಡ ಪಠಿಸಿರಿ.



**ವೃಶ್ಚಿಕ**

ಸಾಡೇಸಾತಿ ಕಾಡಾಟ ಇನ್ನು ಐದು ತಿಂಗಳು ಉಳಿಯುತ್ತದೆ. ಸ್ಥಿರ ನೌಕರಿ ಪ್ರಾಪ್ತಿಯಾಗುವುದು. ಸತತ ಪ್ರವಾಸ ಕೈಗೊಳ್ಳಲಿದ್ದೀರಿ. ಉನ್ನತ ಅಧಿಕಾರದ ಯೋಗವಿದೆ. ರಾಜಕಾರಣಿಗಳಿಗೆ ಅತ್ಯಂತ ಶುಭ. ಬಹುದಿನದ ಪರಿಶ್ರಮಕ್ಕೆ ಪ್ರತಿಫಲ. ನವ ಜೀವನದಲ್ಲಿ ಕಾಲಿಡುವ ತರುಣರಿಗೆ ಶುಭೋದಯ. ವಾರಾಂತ್ಯದಲ್ಲಿ ನೌಕರಿದಾರರಿಗೆ ಯಶಸ್ಸು. ಶುಭದಿನ 17. ಸುದರ್ಶನ ಜಪ 1200 ಮಾಡಿರಿ.



**ಧನಸ್ಸು**

ವಿದೇಶ ಪ್ರವಾಸದ ಪ್ರಯತ್ನ ಯಶ ಕೊಡುವುದು. ಹಣ ಖರ್ಚಾದರೂ ಸಾಮಾಜಿಕ ಮನ್ನಣೆ ಲಭಿಸುವುದು. ಬಹು ದಿನಗಳ ನಂತರ ಮಕ್ಕಳ ಬಗ್ಗೆ ಸುವಾರ್ತೆಯನ್ನು ಕೇಳುವಿರಿ. ಉತ್ಸವ ಪ್ರದರ್ಶನಗಳಲ್ಲಿ ಭಾಗವಹಿಸುವಿರಿ. ದೇವತಾ ಪೂಜೆ ಪುನಸ್ಕಾರದಲ್ಲಿ ಭಾಗವಹಿಸುವಿರಿ. ಮಾನಸಿಕ ನೆಮ್ಮದಿ. ಮನೆಯಲ್ಲಿ ಸಂತೋಷ ನೆಲೆಸಲಿದೆ. ಶುಭದಿನ 18. ಕುಲದೇವತಾ ಪ್ರಾರ್ಥನೆ ಮಾಡಿರಿ.



**ಮಕರ**

ಏಕಾದಶ ಗುರುವಿನ ಅನುಗ್ರಹ ಸಿಗಲಿದೆ. ಒಂದನ್ನು ಹೊರತುಪಡಿಸಿ ಉಳಿದ ಆಕಾಶ ಕಾಯಗಳೆಲ್ಲ ಪ್ರತಿಕೂಲವಾಗಿರುತ್ತವೆ. ಬಂಧುಗಳೂ ನಿಮ್ಮ ಶತ್ರುಗಳೊಡನೆ ಸೇರುವರು. ಅಷ್ಟಮದ ರವಿಕುಜರಿಂದ ಅಗ್ನಿ ಭಯವಿದೆ. ಮೂಲವ್ಯಾಧಿ ಕಾಣಿಸಲಿದೆ. ಅಧಿಕಾರಿಗಳಿಗೆ ಅಧಿಕಾರ ಚ್ಯುತಿಯ ಸಂದರ್ಭ ಎದುರಾಗಬಹುದು ಎಚ್ಚರದಿಂದ ವ್ಯವಹರಿಸಿ. ಶುಭದಿನ 16. ನವಗ್ರಹ ಶಾಂತಿ ಮಾಡಿಸಿ.



**ಕುಂಭ**

ಹೊಸಮನೆಯ ಪ್ರವೇಶಕ್ಕೆ ಸಿದ್ಧತೆಯಾಗುವುದು. ಉದ್ಯೋಗಸ್ಥ ಮಹಿಳೆಯರಿಗೆ ಉತ್ತಮ ಸಮಯ. ಕೆಲಸದಲ್ಲಿ ಪದೋನ್ನತಿಯಾಗುವುದು. ಇಚ್ಛಿತ ಸ್ಥಳಕ್ಕೆ ವರ್ಗಾವಣೆ ಆಗುವುದು. ಆರ್ಥಿಕವಾಗಿ ನಿರೀಕ್ಷಿತ ಲಾಭ. ಕ್ರಯ ವಿಕ್ರಯಕ್ಕೆ ಸಕಾಲ. ಮಕ್ಕಳ ಭಾಗ್ಯೋದಯ ಸಂಬಂಧದಲ್ಲಿ ಮದುವೆಯ ಪ್ರಯತ್ನದಲ್ಲಿ ಯಶಸ್ಸು. ಮಹತ್ವದ ಕೆಲಸದಲ್ಲಿ ಮುನ್ನಡೆ. ಶುಭದಿನ 20. ಶಂಕರಾಚಾರ್ಯರ ಸೌಂದರ್ಯ ಲಹರಿ ಪಠಿಸಿರಿ.



**ಮೀನ**

ನವ ವಿವಾಹಿತರಿಗೆ ಸಂತತಿ ಪ್ರಾಪ್ತಿ ಯಾ ಪ್ರಾಪ್ತಿಯ ಲಕ್ಷಣ. ಅನೇಕ ದಿನಗಳ ನಿರುದ್ಯೋಗ ಸಮಸ್ಯೆ ಬಗೆ ಹರಿಯುವುದು. ಹೊಟ್ಟೆ ಕಿಚ್ಚಿನ ಜನರಿಂದ ಪರೋಕ್ಷ ತೊಂದರೆ ಆಗಬಹುದು. ನಿಮ್ಮ ಶ್ರಮಕ್ಕೆ ತಕ್ಕ ಮನ್ನಣೆ ಸಿಗಲಿದೆ. ಕೆಲಸ ಕಾರ್ಯಗಳಿಂದ ಹೆಚ್ಚಿನ ಧನಲಾಭ. ಷೇರು ವ್ಯವಹಾರದಾರರಿಗೆ ಬಂಡವಾಳದ ಹಿಡಿತವಿರಲಿ. ಶುಭದಿನ 19. ಗಣಪತಿಗೆ ದೂರ್ವಾರ್ಚನೆ ಮಾಡಿರಿ.